ಸೂರ್ಯನ ಕಿರಣಗಳು ಇನ್ನೂ ಅಡ್ಡವಾಗಿರಲಿಲ್ಲ. ಸಮುದ್ರದ ಭೋರ್ಗರೆತವೂ ಕಡಿಮೆಯಾಗಿರಲಿಲ್ಲ. ಹಿತೇಶನಿಗೆ ಭಯವಿನ್ನೂ ದೂರವಾಗಲಿಲ್ಲ. ಮುತ್ತುಚಾಂಡಿಯ ಒತ್ತಾಯಕ್ಕೆ `ಬಂಡೆ'ಯತ್ತ ನಡೆದ. ಸಮುದ್ರ ಅಲೆಗಳ ಜೊತೆಗೆ ಬೀಸಿ ಬರುವ ಬಿಸಿ ಗಾಳಿ ಇನ್ನೂ ತಂಪಾಗಿರಲಿಲ್ಲ. ತಲೆಯಲ್ಲಿ ಅಲೆಗಳ ಭೋರ್ಗರೆತದಂತೆ ವಿಪರೀತ ಮೊರೆತ ಸೇರಿ ತಲೆ ಸಿಡಿದು ಹೋಗುವಂತೆ ಭಾಸವಾಯಿತು. `ಬಂಡೆ'ಗೆ ಬಂದಾಗ ಹಿತವೆನಿಸಿದರು ಉಸಿರುಗಟ್ಟಿಸುವ ವಾತಾವರಣ ಅಲ್ಲಿಯದೆನಿಸಿತು.

ಕಾಕುಟ್ಟ ಗಲ್ಲೆಯ ಹಿಂಭಾಗಕ್ಕಿದ್ದ ಕೋಣೆಯೊಳಗೆ ಅವರನ್ನು ಕರೆದು ಕೊಂಡು ಹೋದ. ಎರಡು ಆಕರ್ಷಕ ಕಲಾಕೃತಿಗಳಂತಿರುವ ಕೆತ್ತನೆಯ ಕೆಲಸವಿರುವ ಮೇಜಿನ ಮುಂದೆ ಅವರಿಬ್ಬರನ್ನು ಕೂರಿಸಿ ಕೆಲಸದಾಳುವನ್ನು ಕರೆದ. ಕೆಲಸದಾತ ಬಂದು ಅವನ ಎದುರು ನಿಲ್ಲುತ್ತಲೇ ಕಣ್ಸನ್ನೆಯಲ್ಲಿ ಏನನ್ನೋ ತರಲು ಸೂಚಿಸಿದ. ಕೆಲಸದಾತ ಬರಿದಾದ ಗಾಜಿನ ಲೋಟಗಳನ್ನು ತಂದು ಮೇಜಿನ ಮೇಲಿರಿಸಿದ. ಕಾಕುಟ್ಟ ಕೂಡ ಅವರ ಜೊತೆ ಸೇರಿದ.

ಕೆಲಸದಾತ ಸ್ಕಾಚ್‌ನ ಬಾಟಲ್ ಜೊತೆಗೆ ಸೋಡಾ, ಐಸ್ ಕ್ಯೂಬ್‌ಗಳನ್ನು ತಂದು ಅವರ ಮುಂದೆ ಇಟ್ಟ. ಅವರಿಬ್ಬರ ಅನುಮತಿಯನ್ನು ಪಡೆಯದೆಯೇ ಕಾಕುಟ್ಟ ಅದರ ಮುಚ್ಚಳ ತೆರೆದು ಸಮಾನವಾಗಿ ಮೂರು ಗ್ಲಾಸುಗಳಿಗೂ ಸುರಿದು ಸೋಡ ಬೆರೆಸಿ ಅವರಿಬ್ಬರತ್ತನೂ ಸರಿಸಿ ತೆಗೆದುಕೊಳ್ಳುವಂತೆ ಸೂಚಿಸಿದ.

ಹಿತೇಶ ನಿರಾಕರಣೆಯ ಸಂಜ್ಞೆ ಮಾಡುತ್ತಲೇ ಕಾಕುಟ್ಟ ಆಶ್ಚರ್ಯ ತೋರಿಸಿದ.

'ಇದರಿಂದ ನಿನ್ನ ಜೀವಕ್ಕೇನೂ ಹಾನಿಯಿಲ್ಲ. ಸ್ವಲ್ಪ ತೆಗೆದುಕೋ, ಇಷ್ಟವಿಲ್ಲದಿದ್ದರೆ ಬಿಟ್ಟು ಬಿಡು'

'ಹೌದು, ನಿನ್ನ ಯಾರೂ ಒತ್ತಾಯಿಸುವುದಿಲ್ಲ. ನಿನಗೆ ಇಷ್ಟವಿಲ್ಲದಿದ್ದರೆ ನಿಲ್ಲಿಸು'' ಮುತ್ತುಚಾಂಡಿ ಸ್ವರ ಬೆರೆಸಿದ. ತನ್ನ ಗ್ಲಾಸನ್ನು ಕೈಗೆ ತೆಗೆದು ಕೊಳ್ಳುತ್ತಾ ಹಿತೇಶನನ್ನು ಹುರಿದುಂಬಿಸಿದ.

ಹಿತೇಶ ಅಳುಕುತ್ತಲೇ ಕೈ ಚಾಚಿದ. ಗಾಜಿನ ಲೋಟವನ್ನು ತೆಗೆದು ಕೊಳ್ಳುತ್ತಲೇ ಅವನ ಕೈ ನಡುಗಿತು. ಮೆತ್ತಗೆ ತುಟಿಗಿರಿಸಿಕೊಂಡು ಹೀರಿದ. ಒಗರು ಹುಳಿ ಕಹಿಯ ರುಚಿಗೆ ಮುಖ ಕಿವುಚಿದ. ಉರಿಯ ದ್ರವ ಗಂಟಲಿನಿಂದ ಹರಿದು ಹೊಟ್ಟೆ ಸೇರುತ್ತಲೇ ಸಮಾಧಾನವೆನಿಸಿತು. ನಿಧಾನಕ್ಕೆ ಉಳಿದ ದ್ರವವನ್ನು ಸ್ವಲ್ಪ ಸ್ವಲ್ಪವೇ ಹೀರಿದ. ಕಾಕುಟ್ಟ ಅವನಲ್ಲಾದ ಬದಲಾವಣೆಯನ್ನು ಗಮನಿಸಿದ. ಮೆಲ್ಲಗೆ ಅವನ ಕೈಯನ್ನು ಹಿಡಿದು ಪ್ರಶ್ನೆ ಹಾಕಿದ.

'ಹಿತೇಶ, ಲಹರಿಯನ್ನು ನೀನು ಮೊದಲ ಬಾರಿಗೆ ಎಲ್ಲಿ ಭೇಟಿಯಾದೆ?'

ಹಿತೇಶ ಉನ್ಮಾದದ ಸ್ಥಿತಿಯಲ್ಲಿ ತನ್ನ ಹಾಗೂ ಲಹರಿಯ ಕಥೆಯನ್ನೆಲ್ಲಾ ಬಿಚ್ಚಿಟ್ಟ!

7.

ಕಾರಿನ ವೇಗವನ್ನು ನಿಯಂತ್ರಣಕ್ಕೆ ತಂದು ರಸ್ತೆಯಂಚಿನ ಒಂಟಿ ಮರದ ನೆರಳಿಗೆ ನಿಲ್ಲಿಸಿ ಸುತ್ತಲೂ ದೃಷ್ಟಿ ಬೀರಿದಳು ಮೇನಕಾ. ತಾನೇನೋ ತಪ್ಪು ಮಾಡಿದೆನೆನ್ನುವ ಅರಿವಾಗುತ್ತಲೇ ಕಾರಿನ ಬಾಗಿಲು ತೆರೆದು ಹೊರಗೆ ಇಳಿದಳು. ತನ್ನೆದುರಿಗೆ ತೆರೆದುಕೊಂಡ ಕವಲು ಹಾದಿಗಳು ಅವಳನ್ನು ತಪ್ಪು ಮಾಡಿದೆನೆನ್ನುವ ಕೀಳರಿಮೆಗೆ ತಳ್ಳಿದವು. ಈ ಸಮಯದಲ್ಲಿ ಕಿರಣನ ಸಹಾಯ ಅಗತ್ಯವಾಗಿತ್ತು. ಕಾರಿನೊಳಗೆ ಯುಎಸ್ಬಿಗೆ ಅಳವಡಿಸಿದ ಮೊಬೈಲನ್ನು ತೆಗೆದು ಆತುರತಾತುರವಾಗಿ ಕಿರಣನ ಮೊಬೈಲ್ ಸಂಖ್ಯೆಗೆ ಪ್ರಯತ್ನಿಸಿದಳು. ಮೊಬೈಲ್‌ನಲ್ಲಿ ಆ ಸಂಖ್ಯೆಯ ಎಲ್ಲಾ ಮಾರ್ಗಗಳು ಮುಚ್ಚಿರುವ ಪೂರ್ವ ಸೇರ್ಪಡೆಯ ಸಂದೇಶ ಹೊರ ಹೊಮ್ಮಿತ್ತು. ತನ್ನ ಆತುರದ ನಿರ್ಧಾರಕ್ಕೆ ಹಳಿದುಕೊಳ್ಳುವಂತಾಯಿತು. ಕಾರಿನ ಡ್ರೈವರ್‌ನನ್ನು ಕರೆದುಕೊಂಡು ಬರೋಣ ವೆಂದರೆ ಭುಜಂಗೇಶರಾಯರು ಇನ್ನೂ ಮರಳಿ ಬಂದಿಲ್ಲ. ಹೈದರಾಬಾದ್‌ನ ಯಾವುದೋ ಫಾರಂ ಹೌಸ್‌ನ ಜೊತೆಗೆ ತಮ್ಮ ತೋಟದಲ್ಲಿ ಬೆಳೆಯುವ ಯಾವುದೋ ಬೆಳೆಯನ್ನು ಮಾರಾಟ ಮಾಡಾಲು ಒಂದು ಒಪ್ಪಂದಕ್ಕೆ ಸಹಿ ಹಾಕಲು ಹೋದವರು ಇನ್ನೂ ಮರಳಿ ಬಂದಿಲ್ಲ.

ಒಂಟಿಯಾಗಿ ಹೊರಡುವ ಅನಿವಾರ್ಯತೆ ಎದುರಾದದ್ದು ಅನಾಮಧೇಯ ಪತ್ರದಿಂದಾಗಿ. ಸಿಟಿಯಿಂದ ಐದು ಮೈಲಿಗಳಷ್ಟು ದೂರವಿರುವ ಹಳೇಯ ಕಟ್ಟಡದ ಎರಡನೆ ಅಂತಸ್ತಿಗೆ ಅಗತ್ಯವಾಗಿ ಮೂರು ಲಕ್ಷ ಹಣದೊಂದಿಗೆ ಬರಬೇಕೆನ್ನುವ ಪತ್ರ. ಜೊತೆಗೆ ಲಹರಿಯ ಬಗ್ಗೆ ಮಾಹಿತಿಯನ್ನು ಕೊಡುವ ಆಶಯವನ್ನು ಬರೆಯಲಾಗಿತ್ತು. ಅಸ್ಪಷ್ಟ ಕನ್ನಡದ ಅಕ್ಷರಗಳು. ಇನ್ಯಾವುದೋ ಭಾಷೆಯನ್ನು ಬೆರೆಸಿದಂತೆ ಬರೆದಿರುವ ಪತ್ರವನ್ನು ಕಂಡ ಕೂಡಲೇ ಕಾಶಮ್ಮ ಗೋಳೋ ಎಂದು ಅತ್ತಿದ್ದರು.

ಸಿಡುಕಿನಿಂದಲೇ ಅವರ ಕೈಯಿಂದ ಪತ್ರವನ್ನು ಕಿತ್ತುಕೊಂಡ ಮೇನಕಾ ಅದನ್ನು ಓದಿ ಒಮ್ಮೆ ಆತಂಕಕ್ಕೊಳಗಾಗಿದ್ದಳು. ಮನೆಯಲ್ಲಿ ಬೇರೆ ಯಾರಿಗೂ ವಿಷಯವನ್ನು ತಿಳಿಸದೆ ಡ್ರೈವರ್ ಶೇಖರನಿಗೆ ಫೋನಾಯಿಸಿದಳು. ಆತನಿಂದ ಯಾವುದೇ ಉತ್ತರವಿಲ್ಲದಾಗ ತನ್ನ ತಂದೆಗೆ ಫೋನಾಯಿಸಿದಳು. ತಂದೆಯಿಂದ ನೆಗೆಟಿವ್ ಉತ್ತರ ಬಂತು.

'ವ್ಯವಹಾರ ಇನ್ನೂ ಕುದುರಿಲ್ಲ. ಇನ್ನೊಂದೆರಡು ದಿನ ಬೇಕಾದೀತು. ಕರೆ ಮಾಡಿರುವ ಉದ್ದೇಶವೇನು?' ಅವರ ಪ್ರಶ್ನೆಗೆ ಉತ್ತರಿಸದಿರುವುದೇ ಕ್ಷೇಮವೆನಿಸಿದರೂ ಅದು ಮುಂದೆ ಅನರ್ಥಕ್ಕೆ ಹಾದಿಯಾದಿತೆಂದು ಮನವರಿಕೆಯಾಯಿತು.

'ಅಗತ್ಯವಾಗಿ ಯೂನಿವರ್ಸಿಟಿಗೆ ಹೋಗುವುದಿದೆ. ಶೇಖರನ ಅಗತ್ಯವಿತ್ತು. ಅದಕ್ಕೆ ಕೇಳ್ದೆ. ನೀವು ಇವತ್ತೇ ಬರುವ ಹಾಗಿದ್ದರೆ ನಾನು ಅವನಿಗಾಗಿ ಕಾಯುತ್ತಿದ್ದೆ. ಅದಕ್ಕೆ ಕೇಳ್ದೆ' ಉತ್ತರಿಸಿದವಳು ಫೋನ್ ಕರೆಯನ್ನು ಮೊಟಕುಗೊಳಿಸಿದಳು.

ಕಿರಣ ಆ ಹೊತ್ತಿಗೆ ಅವಳ ತಲೆಗೆ ಪ್ರವೇಶ ಪಡೆದಿರಲಿಲ್ಲ. ಆಗ ಅವನ ನೆನಪಾಗುತ್ತಿದ್ದರೂ ಅವಳು ಕಿರಣನ ವಿಷಯವನ್ನು ಅ ಮನೆಯಲ್ಲಿ ಹೇಳುತ್ತಿರಲಿಲ್ಲ. ಇದರಿಂದ ಕಾಶಮ್ಮ ಇನ್ನಷ್ಟು ನಿರಾಶಳಾಗಿ ಅನರ್ಥ ಮಾಡಿಕೊಂಡರೆ ಕಷ್ಟ. ಅದಕ್ಕಾಗಿ ಧೈರ್ಯದಿಂದ ತನ್ನದೇ ಕಾರನ್ನು ಹೊರಗೆ ತೆಗೆದು ಪತ್ರದಲ್ಲಿ ಸೂಚಿಸಿರುವಂತೆ ಸಿಟಿಯಿಂದ ಹೊರಗಿರುವ ಹಳೆಯ ಕಟ್ಟಡದತ್ತ ಓಡಿಸಿದ್ದಳು.

ಆದರೆ ತಾನು ಒಂಟಿಯಾಗಿ ಅಲ್ಲಿಗೆ ಹೋಗುವುದು ಅಪಾಯವೆನ್ನುವ ಅರಿವಾಗುತ್ತಲೇ ಕಾರಿನ ವೇಗ ತಗ್ಗಿಸಿದಳು. ಆಗ ನೆನಪಿಗೆ ಬಂದವನು ಕಿರಣ. ಈಗ ಅವನನ್ನು ಸಂಪರ್ಕಿಸಲು ಸಾಧ್ಯವಿಲ್ಲ. ಹಿಂದಕ್ಕೆ ಹೋಗಿ ಅವನನ್ನು ಕರೆದುಕೊಂಡು ಬರಲೇ ಅನಿಸಿದರೂ, ಅದು ಮತ್ತಷ್ಟು ಸಮಯವನ್ನು ಹಾಳು ಮಾಡುವುದರಿಂದ ಆ ಪತ್ರವನ್ನು ಬರೆದವನು ತಪ್ಪಿಸಿಕೊಳ್ಳುವ ಸಾಧ್ಯತೆಯಿದೆ ಅನಿಸಿತು.

ಆ ನಿರ್ಧಾರವನ್ನು ಅಲ್ಲಿಗೆ ಬಿಟ್ಟು ಕಾರಿನೊಳಗೆ ತೂರಿಕೊಂಡಳು. ಕಾರು ಆ ನಿರ್ಜನವಾದ ಬಯಲಿನ ಟಾರು ರಸ್ತೆಯಲ್ಲಿ ಮತ್ತೆ ವೇಗ ಪಡೆದುಕೊಂಡು ಸಾಗಿತು. ಸಿಟಿಯಿಂದ ಹೊರಗಿರುವ ಹಳೆಯ ಕಟ್ಟಡ ಯಾವುದು? ಪತ್ರ ಬರೆದಿರುವವರು ಯಾರು? ಲಹರಿಯ ವಿಷಯ ಆ ವ್ಯಕ್ತಿಗೆ ಹೇಗೆ ಗೊತ್ತು? ಅವಳ ಕಣ್ಮರೆಯ ಹಿಂದೆ ಅದೇ ವ್ಯಕ್ತಿಯ ಕೈವಾಡವೇ? ಪ್ರಶ್ನೆಗಳು ಉದ್ಭವಿಸಿ ಅವಳನ್ನು ಕುತೂಹಲಕ್ಕೆಳೆದವು.

ಸಿಟಿ ಹತ್ತಿರವಾಗುತ್ತಲೇ ಕಾರಿನ ವೇಗವನ್ನು ನಿಧಾನಗೊಳಿಸಿ ಅತ್ತಿತ್ತ ನೋಡುತ್ತಾ ಸಾಗಿದಳು. ವಾಹನಗಳ ಸಂಚಾರ ದಟ್ಟವಾಗಿರುವುದರಿಂದ ಕೆಲವೊಮ್ಮೆ ಕಟ್ಟಡಗಳು ಕಣ್ತಪ್ಪಿ ಹೋಗುತ್ತಿದ್ದವು. ಅದಕ್ಕಾಗಿಯೇ ಕಾರನ್ನು ಪಕ್ಕಕ್ಕೆ ಬಿಟ್ಟು ಕೆಳಗಿಳಿದಳು. ಮೈಲುಗಳಷ್ಟು ದೂರ ನಡೆದೇ ಸಾಗಿದರೂ ಚಿಂತೆಯಿಲ್ಲವೆನಿಸಿತು. ದಾರಿ ಸವೆಸುತ್ತಾ ಮುಂದಕ್ಕೆ ಸಾಗಿದಳು. ತಕ್ಷಣವೇ ಕರ್ಕಶ ಹಾರನ್ನೊಂದಿಗೆ ಕಾರೊಂದು ಅವಳ ಪಕ್ಕದಲ್ಲಿಯೇ ಹಾದು ಸ್ವಲ್ಪ ಮುಂದಕ್ಕೆ ಸಾಗಿ ಅದೇ ವೇಗದಲ್ಲಿ ಹಿಮ್ಮುಖವಾಗಿ ಚಲಿಸಿ ಅವಳಿಗೆ ಒರೆಸುವಂತೆ ನಿಂತಿತು. ಆಶ್ಚರ್ಯ ಬೆದರಿಕೆಯಿಂದ ಚರಂಡಿಗೆ ಹಾರಿದವಳು ಕಾರಿನ ಒಳಗಿರುವ ವ್ಯಕ್ತಿಯನ್ನು ಗುರುತಿಸುವ ಪ್ರಯತ್ನ ಮಾಡಿದಳು. ಆ ವ್ಯಕ್ತಿಯ ನೋಟ ಬೇರೆ ಕಡೆಗಿತ್ತು. ಆ ವ್ಯಕ್ತಿ ಉದ್ದೇಶಪೂರ್ವಕವಾಗಿ ತನ್ನ ಬಳಿ ಕಾರನ್ನು ನಿಲ್ಲಿಸಿದ್ದಲ್ಲವೆನ್ನುವ ಸಮಾಧಾನದ ನಿಟ್ಟುಸಿರಿಟ್ಟು ಚರಂಡಿಯಿಂದ ಮೇಲೆ ಬಂದವಳ ಸೀರೆಯ ಅಂಚಿಗೆ ಮಣ್ಣು ಮೆತ್ತಿಕೊಂಡಿತ್ತು. ಬಾಗಿ ಮಣ್ಣನ್ನು ಒರೆಸಿಕೊಂಡವಳು ತಲೆಯೆತ್ತುವಷ್ಟರಲ್ಲಿ ಕಾರಿನಿಂದ ಇಳಿದ ವ್ಯಕ್ತಿ ಅವಳ ಎದುರಿಗೆ ಪ್ರತ್ಯಕ್ಷನಾಗಿ ನಿಂತಿದ್ದ.

'ನಮಸ್ತೆ ಮೇಡಂ, ನೀವೇನು ಇಲ್ಲಿ? ಕೆಳಗೆ ಇಳಿದು ಏನು ಮಾಡ್ತಾ ಇದ್ದೀರಿ?' ವ್ಯಂಗ್ಯದ ಪ್ರಶ್ನೆ ಎಸೆದ ವ್ಯಕ್ತಿಯನ್ನು ದುರುಗುಟ್ಟಿಕೊಂಡು ನೋಡಿದಳು.

(ಸಶೇಷ)